ಉತ್ತರಗಳನ್ನು ಹಾಗೂ 21–7–2004ರ ಲಿಖಿತ ಮೂಲಕ ಉತ್ತರಿಸಿರುವ 25 ಪ್ರಶ್ನೆಗಳ ಪೈಕಿ 24 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಸಭೆಯ ಮುಂದೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳನ್ನು ಮಂಡಿಸಲಾಯಿತು. * **ಅನುಬಂಧ I ಮತ್ತು II**

4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ನೀಡಿರುವ ಕರ್ನಾಟಕ ಸರ್ಕಾರದ ದಿನಾಂಕ: 31ನೇ ಮಾರ್ಚ್ 2003ರ ಅಂತ್ಯದವರೆಗಿನ ಸಿವಿಲ್ ವರದಿಯನ್ನು ಹಾಗೂ ರಾಜಸ್ವ ಸ್ವೀಕೃತಿಗಳನ್ನು ಸಭೆಯ ಮಂದಿಡುತ್ತೀದ್ದೇನೆ.

ಅಧ್ಯಕ್ಷರು : ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸಲಾಯಿತು.

5. ನಿಯಮ 60ರ ಮೇರೆಗೆ ಚರ್ಚೆ

ವಿಷಯ : ಸಿ.ಇ.ಟಿ. ಚಿಕ್ಕಟ್ಟು ಬಗೆಹರಿಸಿರುವ ಬಗ್ಗೆ:

†**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಸಚಿವರು** : ಮಾನ್ಯ ಅಧ್ಯಕ್ಷರೆ, ನಿಯಮ 60ರ ಅಡಿಯಲ್ಲಿ ನಾವು ವೃತ್ತಿ ಶಿಕ್ಷಣ ಪ್ರವೇಶದ ಅವ್ಯವಸ್ಥೆ ಕುರಿತಂತೆ ಚರ್ಚೆ ಮಾಡುವುದಕ್ಕೆ ಸರ್ವ ಪಕ್ಷಗಳ ಹಿರಿಯ ನಾಯಕರುಗಳು ಸಹ ಜೊತೆ ಸೇರಿ ನಾವು ಒಂದು ನಿರ್ಣಯಕ್ಕೆ ಸೂಚನೆಯನ್ನು ಮಂಡಿಸಿದ್ದೇವೆ. ತಾವು ಅದಕ್ಕೆ ಅವಕಾಶ ಕೊಡಬೇಕು ಅಂತ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಸರ್ವಪಕ್ಷ ಎಂದು ಕರೆದದ್ದು ಸದುದ್ದೇಶದಿಂದ. ಇಲ್ಲಿ ಮಾನ್ಯ ರಮೇಶ್‌ಕುಮಾರ್ ನಮ್ಮ ಪಕ್ಷದಲ್ಲಿ ಕುಳಿತಿದ್ದಾರೆ. ಅವರನ್ನು ನೋಡಿ ನೀವು ಸರ್ವಪಕ್ಷವೆಂದು ಕರೆದಿರಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮಾನ್ಯ ಮಾಧುಸ್ವಾಮಿಯವರು ವಾಟಾಳ್ ನಾಗರಾಜ್‌ರವರು, ಜಿ.ವಿ. ಶ್ರೀರಾಮರೆಡ್ಡಿಯವರು, ಕೆ. ಜಯಪ್ರಕಾಶ್ ಹೆಗ್ಡೆಯವರು ರಾಜೇಂದ್ರನ್‌ರವರು ಹೀಗೆ ಅನೇಕ ಪ್ರಮುಖರು ಇದಕ್ಕೆ ಸಹಿ ಮಾಡಿದ್ದಾರೆ. ಈ ವೃತ್ತಿ ಶಿಕ್ಷಣ ಪ್ರವೇಶದ ಅವ್ಯವಸ್ಥೆಯಿಂದಾಗಿ ಇನ್ನಷ್ಟು ಆ ವ್ಯವಸ್ಥೆಗೊಂಡಿದೆ. ಕಳೆದ ವರ್ಷ ವೃತ್ತಿ ಶಿಕ್ಷಣ ಪ್ರವೇಶ ಇದೇ ರೀತಿ ಗಂಭೀರ ಪರಿಸ್ಥಿತಿಯನ್ನು ಸೃಷ್ಟಿಸಿತ್ತು. ಸರ್ಕಾರದ ವಿಧಾನ ಪ್ರಕ್ರಿಯೆಯಿಂದಾಗಿ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಸರ್ಕಾರದ ಕೊನೆ ಗಳಿಗೆಯಲ್ಲಿ ತೆಗೆದುಕೊಂಡ ಕ್ರಮ ತೇಪೆ ಹಾಕುವ ಕೆಲಸ ಮಾಡಿ ಪ್ರವೇಶ ನೀಡುವಂತೆ ಮಾಡಿತು. ಆದರೆ ಒಂದು ವರ್ಷ ಕಳೆದರೂ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗಿಲ್ಲ. ಸೀಟು ಹಂಚಿಕೆ ಮತ್ತು ಶುಲ್ಕ ನಿರ್ಧಾರ ಇನ್ನೂ ಮರೀಚಿಕೆಯಾಗಿದೆ; ಇದಕ್ಕೆ ಸರ್ಕಾರದ ವಿಳಂಬ ನೀತಿ ಕಾರಣವಾಗಿರುತ್ತದೆ. ಸರ್ಕಾರ ಹಾಗೂ ಆಡಳಿತ ವರ್ಗದ ಸಂಘರ್ಷದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರುಗಳು ಹೈರಾಣವಾಗಿದ್ದಾರೆ. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಅರ್ಹತೆ ಇದ್ದರೂ ಶುಲ್ಕ ಭರಿಸಲಾಗದೇ ಸೀಟುಗಳನ್ನು ಕೆಲವು ವಿದ್ಯಾರ್ಥಿಗಳು ವಾಪಸ್ಸು ಮಾಡಿದ ಪ್ರಸಂಗಗಳಿವೆ. ಇಂತಹ ಸಾರ್ವಜನಿಕ ಮಹತ್ವವುಳ್ಳ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ನಾನು ವಿನಂತಿ

ಮಾಡಿಕೊಳ್ಳುತ್ತೇನೆ. ನಾನು ಈ ಸಂದರ್ಭದಲ್ಲಿ ಬಹಳ ಗಂಭಿರವಾದ ವಿಷಯ, ರಾಜ್ಯದ ಬಡ ವಿದ್ಯಾರ್ಥಿಗಳನ್ನು ಅವರು ಬಹಳ ಕಂಗಾಲಾಗಿದ್ದಾರೆ. ಅವರು ಎಷ್ಟು ಕಂಗಾಲಾಗಿದ್ದಾರೆ. ಅವರ ಪಾಲಕರು ಎಷ್ಟು ಕಂಗಾಲಾಗಿದ್ದಾರೆ. ಶಿಕ್ಷಣ ಕ್ಷೇತ್ರ ಯಾವ ರೀತಿಯ ಒಂದು ಚಿಂತನೆಯ ಕಣದಲ್ಲಿದೆ ಅಂದರೆ, ನನ್ನ ಹತ್ತಿರ ಶರಣಪ್ಪ ಎನ್ನುವ ಒಬ್ಬ ವಿದ್ಯಾರ್ಥಿಯ ವಿವರ ಇದೆ. ಆತ ಸಿ.ಇ.ಟಿ. ಯಲ್ಲಿ ಇಂಜಿನಿಯರಿಂಗ್ ವಿಭಾಗದಲ್ಲಿ ಫಸ್ಟ್ ರ್‍ಯಾಂಕ್ ಬಂದಿದ್ದಾನೆ. ಆತ ಬಿಜಾಪುರದ ವಿದ್ಯಾರ್ಥಿ. ಮೆಡಿಕಲ್‌ನಲ್ಲಿ 3ನೇ ರ್‍ಯಾಂಕ್ ಬಂದಿದ್ದಾನೆ. ಅವರ ತಂದೆ ಕೂಲಿ ಕೆಲಸ ಮಾಡುವವರು. ಮಾನ್ಯ ಅಧ್ಯಕ್ಷರೆ ಇದನ್ನು ತಾವು ಗಮನಿಸಬೇಕು. ಆತ ಇವತ್ತು ಈ ಉನ್ನತ ಶಿಕ್ಷಣವನ್ನು ಪಡೆಯುವುದಕ್ಕೆ ಆತ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಶಿಕ್ಷಣ ಪಡೆಯುವುದಕ್ಕೆ ಆಗುವುದಿಲ್ಲವೆಂದು ಹೇಳಿ ಕೈ ಚೆಲ್ಲಿ ಕುಳಿತಿದ್ದಾರೆ. ಅಂತಹ ದುಸ್ಥಿತಿ ಇದೆ. ನಾವು ಯೋಚನೆ ಮಾಡೋಣ.

ಶ್ರೀ ಡಿ. ಮಂಜುನಾಥ್ : ತಾವು ಹೇಳುವುದು ನಿಜ. ಆತನ ತಂದೆ ಕೂಲಿ ಮಾಡುವವರು. ಅವರ ಮಗ ರ್‍ಯಾಂಕ್ ಬಂದಿದ್ದಾರೆ. ಅವನಿಗೆ ಪ್ರೈಜ್ ಕೊಟ್ಟಿದ್ದು ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮಂತ್ರಿಗಳು ಎಲ್ಲಾ ಸದಸ್ಯರು ಮಾತನಾಡಿದ ಮೇಲೆ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆತನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದಕ್ಕೆ ಸಂಘ ಸಂಸ್ಥೆಗಳು ಮುಂದೆ ಬಂದಿವೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ ಈಗ ಅವರು ನಿಲುವಳಿ ಸೂಚನೆ ತಂದಿದ್ದಾರೆ. ಅಧ್ಯಕ್ಷರು ಅನುಮತಿ ಕೊಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಅದಕ್ಕಿಂತ ಮುಂಚಿತವಾಗಿ ನಾನು ಪ್ರಾಸ್ತಾವಿಕವಾಗಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ನಾವು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ಆಮೇಲೆ ಅವರು ಉತ್ತರ ಹೇಳಲಿ. ನಾನಿನ್ನೂ ವಿಷಯವೇ ಪ್ರಸ್ತಾಪ ಮಾಡಿಲ್ಲ. ನಾನು ಶರಣಪ್ಪ ಅಂತ ಒಂದು ಉದಾಹರಣೆ ಹೇಳಿದ್ದೇನೆ ಅಷ್ಟೆ. ಇಂತಹ ಉದಾಹರಣೆಗಳು ನನ್ನ ಹತ್ತಿರ ಸಾಕಷ್ಟು ಇವೆ. ಉದಯರವಿ, ಎನ್ನುವವರು ಲೆಕ್ಚರರ್ಸ್, ಅದರ ಮಗನದ್ದು 97 ಪರ್ಸೆಂಟ್ ಬಂದಿದೆ ಸಿ.ಇ.ಟಿ. ಯಲ್ಲಿ ನಾನು ಎಷ್ಟು ಹೆಸರು ಹೇಳಬೇಕು ಹೇಳಿ. ಅಖಿಲ ಎನ್ನುವ ವಿದ್ಯಾರ್ಥಿನಿ. ಆಕೆ ನಮ್ಮ ಪತ್ರಿಕಾ ವರದಿಗಾರರ ಮಗಳು. ಆಕೆ ಸಹ 97 ಪರ್ಸೆಂಟ್ ತೆಗೆದುಕೊಂಡಿದ್ದಾಳೆ. ಅವಳು ಓದುವುದಕ್ಕೆ ಆಗುವುದಿಲ್ಲ. ಮಂಜುನಾಥ್ ಆತ 97 ಪರ್ಸೆಂಟ್ ತೆಗೆದುಕೊಂಡಿದ್ದಾನೆ. ಆತ ನಿನ್ನೆ ನಮ್ಮ ಜೊತೆಯಲ್ಲಿದ್ದರು. ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ನಾವು ಅವರನ್ನು ಭೇಟಿ ಮಾಡಿಸಿದೆವು. ನಾನು ಈ ರೀತಿಯ ಸಾವಿರಾರು ಉದಾಹರಣೆಗಳನ್ನು ಕೊಡಬಲ್ಲೆ. ಯಾರು 96 ಪರ್ಸೆಂಟ್, 97 ಪರ್ಸೆಂಟ್ ತೆಗೆದುಕೊಂಡು ರ್‍ಯಾಂಕ್ ಬಂದು ಅವರ ಕುಟುಂಬದ ಹಿನ್ನೆಲೆಯಲ್ಲಿ ಅವರ ಬಡತನದಲ್ಲಿ ಅವರ ಕಷ್ಟದ ಜೀವನದಲ್ಲಿ ಅವರು ಬುದ್ಧಿವಂತರಾಗಿದ್ದಾರೋ ಅದೇ ಅವರಿಗೆ ಇವತ್ತು ಶಾಪವಾಗಿದೆ. ಇವತ್ತು ಬುದ್ಧಿವಂತಿಕೆ, ಅರ್ಹತೆ ಎಲ್ಲಾ ಪಡೆದಂತಹ ಈ ವಿದ್ಯಾರ್ಥಿಗಳಿಗೆ ನಾವು ಇವತ್ತು ಮೆಡಿಕಲ್, ಇಂಜಿನೀಯರಿಂಗ್ ಡೆಂಟಲ್ ವಿದ್ಯಾಭ್ಯಾಸವನ್ನು ಕೊಡದೇ ಇರುವಂತಹ ದುಸ್ಥಿತಿಯನ್ನು ತಲುಪುವಂತಹ ಒಂದು ವ್ಯವಸ್ಥೆ ನಿರ್ಮಾಣವಾಗಿದೆ. ಒಬ್ಬ ಇಂಜಿನಿಯರಿಂಗ್ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಫೀಜು ಕಟ್ಟುವುದಕ್ಕೆ 30 ಸಾವಿರ ರೂಪಾಯಿಗಳು ಬೇಕು. ಅವನ

ಹಾಸ್ಟಲ್, ಬುಕ್ಸ್ ಇತ್ಯಾದಿ ಖರ್ಚುಗಳು ಸೇರಿದರೆ ಒಂದು ವರ್ಷಕ್ಕೆ ಒಬ್ಬ ಇಂಜಿನಿಯರಿಂಗ್ ವಿದ್ಯಾರ್ಥಿಗೆ ಒಂದು ಲಕ್ಷ ರುಪಾಯಿ ಬೇಕಾಗುತ್ತದೆ. 4 ವರ್ಷದ ಇಂಜಿನಿಯರಿಂಗ್ ಕೋರ್ಸ್ ಮುಗಿಸಲಿಕ್ಕೆ 4 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಬೇಕಾಗುತ್ತದೆ. ಇವತ್ತು ಮೆಡಿಕಲ್ 5 ವರ್ಷ ಮುಗಿಸುವುದಕ್ಕೆ ಸುಮಾರು 15 ಲಕ್ಷ ರೂಪಾಯಿಗಳಿಗೂ ಹೆಚ್ಚು ಬೇಕಾಗುತ್ತದೆ. ಒಂದು ವರ್ಷಕ್ಕೆ ಒಬ್ಬ ವಿದ್ಯಾರ್ಥಿ ಮೆಡಿಕಲ್‌ಗೆ 1 ಲಕ್ಷ 52 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದರಲ್ಲೂ ಖಾಸಗಿ ಕಾಲೇಜಿಗೆ 2 ಲಕ್ಷ 52 ಸಾವಿರ ರೂಪಾಯಿ ಕೊಡಬೇಕಾಗುವಂತಹ ಸ್ಥಿತಿ ಇದೆ. ಅಂದರೆ ಒಬ್ಬ ವಿದ್ಯಾರ್ಥಿ ಒಂದು ವರ್ಷ ಇಂಜಿನಿಯರಿಂಗ್ ಓದುವುದಕ್ಕೆ ಒಂದು ಲಕ್ಷ ರೂಪಾಯಿ ಬೇಕು, ಮೆಡಿಕಲ್ ಓದಬೇಕಾದರೆ ಒಬ್ಬ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ಎರಡೂವರೆ ಲಕ್ಷ ರೂಪಾಯಿಗಳಿಂದ ಮೂರುವರೆ ಲಕ್ಷ ರೂಪಾಯಿಗಳು ಬೇಕು. ಇವತ್ತು ಸಿ.ಇ.ಟಿ.ದು ಇಷ್ಟು ಗಂಭೀರವಾದ ಪರಿಸ್ಥಿತಿ ಉಲ್ಬಣವಾಗಿದೆ. ನಮ್ಮ ಮುಂದೆ ಇಷ್ಟು ದೊಡ್ಡ ಸವಾಲು ಇದೆ ನಾವು ಇವತ್ತು ಈ ಸದನದ ಮೂಲಕ ಆ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವರ ಪಾಲಕರಿಗೆ ಶಿಕ್ಷಣ ಕ್ಷೇತ್ರದವರಿಗೆ ಒಂದು ಆತ್ಮ ಸ್ಥೈರ್ಯವನ್ನು ವಿಶ್ವಾಸವನ್ನು ತೋರಿಸುವಂತಹ ಸಂದೇಶವನ್ನು ಕಳುಹಿಸಬೇಕು. ನಮ್ಮ ರಾಜ್ಯದಲ್ಲಿ ಬುದ್ಧಿವಂತರಿಗೆ ಮಾನ್ಯತೆ ಇದೆ. ಇಲ್ಲಿ ಬಡವಿದ್ಯಾರ್ಥಿಗಳಿಗೆ ಅರ್ಹರಿಗೆ ಗೌರವ ಇದೆ. ಈ ಸಂದೇಶ ಸದನದಿಂದ ಹೋಗಬೇಕು, ಆ ರೀತಿ ನಮ್ಮ ನಿಲುವು ವ್ಯಕ್ತವಾಗಬೇಕಾಗಿದೆ. ಅದಕ್ಕಾಗಿ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ವಿಷಯದಲ್ಲಿ ನಾವು ಸಾಕಷ್ಟು ಮಾತನಾಡುವುದು ಇದೆ ತಾವು ಅವಕಾಶ ಕೊಟ್ಟಾಗ ನಾನು ಮುಂದೆ ಮಾತನಾಡುತ್ತೇನೆ. ನಾನು ಈಗ ಪ್ರಾಸ್ತಾವಿಕವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ಪ್ರಮುಖವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ, ನಮ್ಮ ಕರ್ನಾಟಕ ಅನೇಕ ವಿಷಯಗಳಿಗೆ ಬಹಳ ಪ್ರಸಿದ್ಧ. ನಾನು ಹೇಳುವುದಿಲ್ಲ. ಗಂಧದ ನಾಡು ಹೇಗೆ ಇತ್ತು, ರೇಷ್ಮೆಯ ಬೀಡು ಹೇಗೆ ಇತ್ತು, ಇತ್ಯಾದಿಗಳು ಎಲ್ಲ ನಮಗೆ ಗೊತ್ತಿದೆ. ನಮ್ಮ ಸಾಂಸ್ಕೃತಿಕವಾದಂತಹ ಹಿರಿಮೆ ಏನು ಇತ್ತು, ಎನ್ನುವ ವಿಷಯಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಶಿಕ್ಷಣ ಕ್ಷೇತ್ರದಲ್ಲಿ ಇವತ್ತು ಕರ್ನಾಟಕ ಈ ದೇಶಕ್ಕೆ ಮಾದರಿಯಾಗಿದೆ. ಕರ್ನಾಟಕದ ಬಗ್ಗೆ ಇವತ್ತು ಶಿಕ್ಷಣ ಕ್ಷೇತ್ರದ ಬಗ್ಗೆ ಹೆಮ್ಮೆಯನ್ನು ಪಟ್ಟುಕೊಳ್ಳುತ್ತಿದ್ದೆವು. ಏಕೆಂದರೆ ಆ ರೀತಿ ಕೆಲವು ಕೆಲಸಗಳನ್ನು ಹಿಂದಿನ ಸರ್ಕಾರಗಳು ಮಾಡಿಕೊಂಡು ಬಂದಿದ್ದವು. ಆದರೆ ಇವತ್ತು ಕರ್ನಾಟಕ ಶಿಕ್ಷಣ ಕ್ಷೇತ್ರದಲ್ಲಿ ತಪ್ಪು ದಾರಿಗೆ ಎಳೆಯುವಂತಹ ರೀತಿಯಲ್ಲಿ ವರ್ತಿಸುತ್ತಿರುವಂತಹ ದುಸ್ಥಿತಿಗೆ ನಾವು ತಲುಪಿದ್ದೇವೆ. ಇವತ್ತು ಕರ್ನಾಟಕ ರಾಜ್ಯ ಅರಿದರೆ ದೇಶದಲ್ಲಿ ಒಂದು ಹೆಮ್ಮೆ ಇತ್ತು. ಆದರೆ ಇವತ್ತು ಕರ್ನಾಟಕದಿಂದಾಗಿ ಅನೇಕ ರಾಜ್ಯಗಳು ಮತ್ತು ದೇಶವೂ ಸಹ ಶಿಕ್ಷಣ ಕ್ಷೇತ್ರದಲ್ಲಿ ದಾರಿ ತಪ್ಪುವಂತಹ ಸ್ಥಿತಿ ನಿರ್ಮಾಣವಾಗುತ್ತಿವೆ. ಮಾನ್ಯ ಅಧ್ಯಕ್ಷರೆ ಶಿಕ್ಷಣ ಈಗ ಬರುಬರುತ್ತಾ ಇದೊಂದು ದೊಡ್ಡ ಉದ್ದಿಮೆಯಾಗಿದೆ. ಇವತ್ತು ಶಿಕ್ಷಣ ಒಂದು ಸೇವಾ ಕ್ಷೇತ್ರವಾಗಿ ಉಳಿದಿಲ್ಲ.

1.10 ಪಿಎಂ.

ಶಿಕ್ಷಣ ಸಂಸ್ಕಾರ ಕೊಟ್ಟು ಅವರಿಗೆ ದಾರಿದೀಪವಾಗಬೇಕು, ಇವತ್ತು ಅದನ್ನು ದಿನೇದಿನೇ ಕಳೆದುಕೊಂಡು ವ್ಯಾಪಾರೀಕರಣ ಕ್ಷೇತ್ರವಾಗಿ ನಿರ್ಮಾಣವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಶಿಕ್ಷಣ ಕ್ಷೇತ್ರ ಈ ರೀತಿಯಾಗಿ ವ್ಯಾಪಾರೀಕರಣವಾಗಲು ಬಿಡಬಾರದು, ಸದನದಲ್ಲಿ ನಾವು ಆ ರೀತಿಯಾದಂತಹ ಮಾತುಗಳನ್ನು ಹೇಳಬೇಕು. ಅಧ್ಯಕ್ಷರೆ, ಇಲ್ಲಿ ಬಹಳ ದೊಡ್ಡ ಸಮಸ್ಯೆಗಳಿವೆ,

ನಾನು ಎಲ್ಲಿಂದ ಪ್ರಾರಂಭ ಮಾಡಬೇಕೆನ್ನುವುದೊಂದು ಸಮಸ್ಯೆ ಇದೆ. ಒಂದು ಕಡೆ ಹೈಕೋರ್ಟ್, ಇನ್ನೊಂದೆಡೆ ಸುಪ್ರೀಂ ಕೋರ್ಟ್ ನಿರ್ಣಯ ಮತ್ತೊಂದೆಡೆ ಕಾಮೆಡ್ (ಕೆ) ನಿರ್ಣಯಗಳು ಇನ್ನೊಂದು ಕಡೆ ಸರ್ಕಾರದ ಪಾತ್ರ. ಇವತ್ತು ಸರ್ಕಾರದ ಪಾತ್ರದ ಬಗ್ಗೆ ನಮ್ಮೆಲ್ಲರಿಗೆ ಬೇಸರ ತರುವಂತಹದ್ದು, ಸರ್ಕಾರ ಏನು ಮಾಡುತ್ತಿದೆ ಎಂದರೆ, ಕೋರ್ಟ್‌ಗಳು ಏನು ಹೇಳಿತು, ಕಾಮೆಡ್ (ಕೆ) ಇವರು ಏನು ಹೇಳುತ್ತಿದ್ದಾರೆ ಇವುಗಳ ನಡುವೆ ರಾಜೀ ಸಂಧಾನ ಹೇಗೆಂದು ನೋಡುತ್ತಿದ್ದಾರೆಯೇ ಹೊರತು, ಸರ್ಕಾರ ಈ ಶಿಕ್ಷಣ ಕ್ಷೇತ್ರ ಹೇಗೆ ಮುಂದುವರೆಯಬೇಕು ಎನ್ನುವಂತಹ ಆತ್ಮವಿಶ್ವಾಸ ಮೂಡಿಸುವಂತಹ ರೀತಿಯಲ್ಲಿ ತಮ್ಮ ವೃತ್ತಿಯಲ್ಲಿ ಆ ರೀತಿಯಾಗಿ ನಡೆದುಕೊಳ್ಳದಿರುವ ದುಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಕೋರ್ಟ್‌ಗಳು ಹೇಳಿದ ಇಂಟರ್‌ಪ್ರಿಟೇಶನ್‌ಗಳು ಮತ್ತು ಕಾಮೆಡ್(ಕೆ) ಅವರು ಹೇಳುತ್ತಿರುವುದನ್ನು ಇದರೊಳಗೆ ರಾಜಿ ಸಂಧಾನ ಹೇಗೆ ಹುಡುಕುವುದು ಎಂಬುದನ್ನು ನೋಡುತ್ತಿದ್ದಾರೆಯೇ ಹೊರತು, ಸರ್ಕಾರ ನಮ್ಮ ಕ್ಷೇತ್ರ ಹೀಗೆ, ಇದು ಹೀಗೆ ನಡೆಯಬೇಕೆನ್ನುವ ಮಾತನ್ನು ಹೇಳುತ್ತಿದ್ದಾರೆ. ನಾನು ಮಾನ್ಯ ಮಂಜುನಾಥ್‌ರವರ ಪತ್ರಿಕಾ ಹೇಳಿಕೆಯನ್ನು ನೋಡಿದ್ದೇನೆ. ಅವರು ಮಾನ್ಯ ಜಾಲಪ್ಪನವರ ಯಾವ ಬೆದರಿಕೆಗೂ ನಾನು ಮಣಿಯುವುದಿಲ್ಲವೆನ್ನುವ ಮಾತುಗಳನ್ನು ಹೇಳಿದ್ದಾರೆ, ನಾನು ಆ ಮಾತನ್ನು ಸ್ವಾಗತ ಮಾಡುತ್ತೇನೆ. ಆದರೆ ಮಣಿಯುವುದಿಲ್ಲವೆಂದು ಹೇಳಿರುವುದು ನಿಮ್ಮದೇ ವಾಖ್ಯದಲ್ಲಿ ಮುಂದಿದೆ. ಜುಲೈ 16ಕ್ಕೆ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸುತ್ತೇವೆಂದು ಹೇಳಿದ್ದೀರಿ. ಆ ಮಾತಿಗೆ ತಾವು ಹೆದರಿಕೊಂಡಿದ್ದೀರೆಂದು ನಾನು ಹೇಳುವುದಿಲ್ಲ, ಏಕೆಂದರೆ ಒಂದು ಸರ್ಕಾರ ಬೆದರಿಕೊಳ್ಳುತ್ತದೆಂದು ಹೇಳುವುದಿಲ್ಲ, ಆದರೆ ಸರ್ಕಾರದನ್ನೇ ಈ ರೀತಿ ಬ್ಲಾಕ್‌ಮೇಲ್ ಮಾಡುವಂತಹ ಶಕ್ತಿಯನ್ನು ಹೊಂದಿರುವವರು ಅನೇಕರಿದ್ದಾರೆ. ನೀವೂ ಕೂಡ ಬಹಳ ಕಷ್ಟದಲ್ಲಿದ್ದೀರಿ. ನಾನು ಉನ್ನತ ಶಿಕ್ಷಣ ಸಚಿವರ ಬಗ್ಗೆ ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ, ಅವರು ಈ ಕ್ಷೇತ್ರದಲ್ಲಿ ಸಾಕಷ್ಟು ನುರಿತವರಿದ್ದಾರೆ, ಹಿರಿಯರಿದ್ದಾರೆ ಅನುಭವಿಗಳಿದ್ದಾರೆ. ಆದರೆ ನಾನು ಇದನ್ನು ಹೇಳಬೇಕೋ ಬೇಡವೋ ಗೊತ್ತಿಲ್ಲ, ಆದರೆ ಹೇಳಲೇಬೇಕು, ನಿಮಗೆ ಇಲ್ಲಿ ಬಹಳ ಉಸಿರುಕಟ್ಟುವಂತಹ ಸ್ಥಿತಿ ಇದೆ. ಏಕೆ ಹಾಗೆ ಆಗಿದೆ ಎಂದರೆ, ಮಾನ್ಯ ಜಿ. ಪರಮೇಶ್ವರರವರು, ಇವರು ನಮ್ಮ ಹಿಂದಿನ ಉನ್ನತ ಶಿಕ್ಷಣ ಸಚಿವರಾಗಿದ್ದರು ಅವರದೊಂದು ಇನ್‌ಸ್ಟಿಟ್ಯೂಷನ್, ಶ್ಯಾಮನೂರು ಶಿವಶಂಕರಪ್ಪನವರು, ಇವರು ಇವತ್ತು ನಮ್ಮ ಗೌರವಾನ್ವಿತ ಸದಸ್ಯರಿದ್ದಾರೆ, ಅವರದ್ದು ಇನ್‌ಸ್ಟಿಟ್ಯೂಷನ್ಸ್, ಶ್ರೀಯುತ ಆರ್.ಎಲ್. ಜಾಲಪ್ಪನವರು, ನಮಗೆಲ್ಲಾ ಒತ್ತಿದೆ, ಪ್ರಭಾಕರ ಕೋರೆಯವರಿರಬಹುದು, ಮಾನ್ಯ ಸೀತಾರಾಂರವರು ಇರಬಹುದು ರೆಹಮಾನ್ ಖಾನ್‌ರವರು, ಅದರದ್ದು ಅಲ್‌ಅಮೀನ್ ಮೆಡಿಕಲ್ ಕಾಲೇಜು, ಅಲಅಮಿನ್ ಡೆಂಟಲ್ ಕಾಲೇಜ್ ಇದೆ. ಟಿ. ಜಾನ್, ಹೆಚ್. ಬಸವರಾಜುರವರು, ಡಿ.ಕೆ. ಶಿವಕುಮಾರ್‌ರವರು, ಮುದ್ದಹನುಮೇಗೌಡರು, ಖಮರುಲ್ ಇಸ್ಲಾಂರವರು, ಸಿ.ಎಂ. ನಾಗರಾಜ್‌ರವರು ಜಾಫರ್ ಷರೀಫ್, ಮುನಿಯಪ್ಪನವರು, ಹೆಚ್.ಸಿ. ಶ್ರೀಕಂಠಯ್ಯನವರು, ಲಿಂಗಯ್ಯನವರು, ಎ.ಜಿ. ಪಾಟೀಲ್‌ರವರು, ಖಂಡ್ರೆಯವರು ಹೀಗೆ; ಅಧ್ಯಕ್ಷರೇ ಮಾನ್ಯ ಡಿ. ಮಂಜುನಾಥ್‌ರವರು ಏನು ಮಾಡುವುದಕ್ಕಾಗುತ್ತದೆ? ಈ ಎಲ್ಲಾ ಕಾಂಗ್ರೇಸ್ ನಾಯಕರ....

ಶ್ರೀ ಎಸ್.ಎಸ್. ಪಾಟೀಲ್ : ನಿಮ್ಮಲ್ಲೂ ಒಬ್ಬರಿದ್ದಾರೆ, ಗುರುತಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಮ್ಮಲ್ಲೂ ಇದ್ದಾರೆ.

ಅಧ್ಯಕ್ಷರು : ಈಗ ಹೆಸರುಗಳನ್ನು ಹೇಳುವುದು ಬೇಡ, ಇದು ಬಹಳ ಗಂಭೀರವಾದ ಪ್ರಶ್ನೆ ಎಂಬುದನ್ನು ನಾನು ಒಪ್ಪುತ್ತೇನೆ, ಈಗ ಹೆಸರುಗಳ ಪ್ರಸ್ತಾಪ ಬೇಡ, ನೀವು ಹೆಸರುಗಳನ್ನು ಪ್ರಸ್ತಾಪ ಮಾಡಿದರೆ ಎಲ್ಲೆಲ್ಲಿಗೊ ಹೋಗಿ ಸಿಇಟಿ ವಿಷಯ ಹೋಗಿಬಿಡುತ್ತದೆ ಆಮೇಲೆ ಬೇರೆ ಬೇರೆ ವೈಯಕ್ತಿಕ ವಿಚಾರಗಳು ಬರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ವಿಷಯದ ಗಾಂಭೀರ್ಯತೆಯಲ್ಲಿ ಕಿಂಚಿತ್ತು ದೋಷ ಬರುವುದಕ್ಕೆ ನಾನು ಅವಕಾಶ ಮಾಡಿಕೊಡುವುದಿಲ್ಲ.

ಶ್ರೀ ಅರಗಜ್ಞಾನೇಂದ್ರ : ಈಗ ವಿಶ್ವೇಶ್ವರ ಹೆಗಡೆಯವರು ಹೇಳುವುದಕ್ಕೆ ಹೊರಟಿದ್ದು ಕಾಮೆಡ್ ಕೆ ಬೇರೆಯಲ್ಲ ಸರ್ಕಾರ ಬೇರೆಯಲ್ಲ ಎರಡೂ ಒಂದೇ ಆಗಿದ್ದಾವೆನ್ನುವುದು, ಇದು ನಮ್ಮ ದುರಾದೃಷ್ಟ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಮ್ಮ ಕರ್ನಾಟಕದ ದುರಾದೃಷ್ಟಕರವೆಂದರೆ, ಪಕ್ಕದ ಅಥವಾ ದೇಶದ ಇತರೆ ರಾಜ್ಯಗಳಲ್ಲಿ ಇಲ್ಲದಿರುವ ಒಂದು ವಿಶೇಷ ಸನ್ನಿವೇಶ ಎದುರಿಸುತ್ತಿರುವುದೆಂದರೆ, ಅರಗಜ್ಞಾನೇಂದ್ರರವರು ಹೇಳಿದರಲ್ಲಾ ಅದು. ಇಲ್ಲಿ ಖಾಸಗಿ ಅನುದಾನಿತ ಸಂಸ್ಥೆಗಳು ಬೇರೆಯಲ್ಲ ಸರ್ಕಾರ ಬೇರೆಯಲ್ಲವೆನ್ನುವ ಸ್ಥಿತಿ ಇದೆ.

ಅಧ್ಯಕ್ಷರು : ಹಾಗೆ ಹೇಳುವುದಕ್ಕೆ ಬರುವುದಿಲ್ಲ, ಈಗ ನಿಮ್ಮ ಪಕ್ಷವಿದೆ, ನಿಮ್ಮ ಪಕ್ಷದಲ್ಲಿ ಕೆಲವರು ಸಂಸ್ಥೆಗಳನ್ನು ನಡೆಸುತ್ತಿದ್ದರೆ, ನೀವು ಅಧಿಕಾರಕ್ಕೆ ಬಂದರೆ, ಆ ರೀತಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ, ಎಲ್ಲಾ ಪಕ್ಷಗಳಲ್ಲೂ ಕೂಡ ಈ ಶಿಕ್ಷಣ ಸಂಸ್ಥೆಗಳನ್ನು ನಡೆಸುವವರು ಇದ್ದಾರೆ, ಅದನ್ನು ಹಾಗೆ ಅರ್ಥೈಸುವುದು ಸರಿಯಲ್ಲ, ನೀವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ವಸ್ತು ಸ್ಥಿತಿ ನಿಮಗೂ ಗೊತ್ತಿದೆ ನಮಗೂ ಗೊತ್ತಿದೆ, ಸರ್ಕಾರ ಇಕ್ಕಟ್ಟಿನಲ್ಲಿರುವ ಸಂದರ್ಭವನ್ನು ನಾವೆಲ್ಲರೂ ಎದುರಿಸುತ್ತಿದ್ದೇವೆ. ಇವತ್ತು ಇಡೀ ಶಿಕ್ಷಣ ಕ್ಷೇತ್ರ ಹೀಗೆ ಆಗುತ್ತಿರುವುದನ್ನು ನಾನು ಉಲ್ಲೇಖ ಮಾಡುತ್ತ, ಮಾನ್ಯ ಸಚಿವರು ಏನು ಹೇಳಿದ್ದಾರೆ ಅವರು ಯಾವುದೇ ಬೆದರಿಕೆಗೆ ಮಣಿಯುವುದಿಲ್ಲ ಎನ್ನುವುದನ್ನು ಕೃತಿರೂಪದಲ್ಲಿ ತೋರಿಸುವಂತಹ ರಾಜಕೀಯ ಇಚ್ಚಾಶಕ್ತಿಯನ್ನು ಪ್ರದರ್ಶಿಸಬೇಕಾದ ಸಂದರ್ಭ ಇದು. ನಾವು ರಾಜಕೀಯ ಇಚ್ಚಾಶಕ್ತಿಯನ್ನು ಪ್ರಕಟಿಸಲಿಲ್ಲ ಎಂದರೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಕೇಳಿದ್ದೇವೆ. ದುರಂತ ಬರಬಾರದು, ಬೇರೆ ಸುದ್ದಿಗಳು ನಮಗೆ ತಲುಪಬಾರದು, ಇವತ್ತು ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಕೇಳುತ್ತಿದ್ದೇವೆ, ಅನೇಕರು ಇನ್ನೂ ಸಬ್ಸಿಡಿ ಕೊಡದಿರುವ ಸಣ್ಣ ಕೈಗಾರಿಕೆಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಕೇಳಿದ್ದೇವೆ. ಈ ರೀತಿಯ ಪ್ರತಿಭಾವಂತಹ ವಿದ್ಯಾರ್ಥಿಗಳಿಗೆ ಅವಕಾಶವಾಗಿಲ್ಲ ಎನ್ನುವ ಸಂದೇಶ ಈ ಸದನದ ಮೂಲಕ ಹೋಗಬಾರದು, ಹಾಗಾಗಿ ನಾವು ವಿಶ್ವಾಸ ತುಂಬುವಂತಹ ಪ್ರಯತ್ನವಾಗಬೇಕು ಎಂದು ಹೇಳುತ್ತೇನೆ. ಇವತ್ತು ನಮ್ಮ ಮುಂದೆ ಮೂರು ಕೋರ್ಟ್‌ಗಳ ತೀರ್ಮಾನವಿದೆ. ಉನ್ನಿಕೃಷ್ಣನ್ ಮತ್ತು ಹೈದರಾಬಾದ್ ಸರ್ಕಾರದ ಮಧ್ಯೆ 1992ನೇ ಇಸವಿಯಲ್ಲಿ ನಡೆದಿರುವ ಸುಪ್ರೀಂ ಕೋರ್ಟ್‌ನ .....

ಅಧ್ಯಕ್ಷರು : ಇದು ಗಂಭೀರವಾದ ಪ್ರಮುಖವಾದ ವಿಚಾರ ಈಗ ಚರ್ಚೆಯಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸಿಇಟಿ ಗೊಂದಲವೇನು ಎನ್ನುವುದು ಇಡೀ ರಾಜ್ಯಕ್ಕೆ ಗೊತ್ತಿರುವ ವಿಚಾರ. ಇದನ್ನು ನಾವು ನಿಲುವಳಿ

ಸೂಚನೆಯ ಮೂಲಕ ಈ ಕಡೆ ಕುಳಿತಿರುವ ಎಲ್ಲರೂ ಸೇರಿ ಪ್ರಸ್ತಾಪ ಮಾಡಿದ್ದೇವೆ, ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಎಲ್ಲರೂ ಸ್ವಲ್ಪ ಮಾತನಾಡುತ್ತಾರೆ, ಅದಾದ ಮೇಲೆ ನೀವು ಅದನ್ನು ಯಾವರೀತಿಯಲ್ಲಾದರೂ ಪರಿವರ್ತನೆ ಮಾಡಿ, ಆದರೆ ಇದಕ್ಕೆ ಒಂದು ಪರಿಹಾರ ಹುಡುಕಿ, ಆ ಪ್ರತಿಭಾವಂತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸುಲಭವಾಗಿ ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣ ಸಿಗಬೇಕು, ಇದು ಸದ್ದುದೇಶ. ಈ ಮೂರು ವರ್ಷದಿಂದ ಗೊಂದಲ ಮುಂದುವರೆದಿದೆ. ಇನ್ನು ಮುಂದೆ ಸಾಮಾನ್ಯ ಬಡಮಕ್ಕಳಿಗೆ ಮೆಡಿಕಲ್ ಇಂಜಿನಿಯರಿಂಗ್ ಶಿಕ್ಷಣ ಎಟುಕದ ಹಾಗೂ ಇದು ಸಾಧ್ಯವಿಲ್ಲವೆನ್ನುವ ತೀರ್ಮಾನಕ್ಕೆ ಬರುತ್ತಿದ್ದಾರೆ, ಪೋಷಕರು ಮುಂದೇನು ಎಂದು ಭವಿಷ್ಯದ ಬಗ್ಗೆ ಚಿಂತನೆ ಮಾಡುತ್ತಿದ್ದಾರೆ. ಸುಮಾರು 90–95 ಜನ, ನಮಗೆ ಅಷ್ಟು ಹಣಕಟ್ಟುವ ಶಕ್ತಿ ನಮ್ಮಲ್ಲಿಲ್ಲ ಅಡ್ಮಿಷನ್ ಬೇಡವೆಂದು ಹೇಳುತ್ತಿರುವುದು ಪತ್ರಿಕೆಗಳ ಮುಖಪುಟಗಳಲ್ಲಿ ಬಂದಿದೆ, ಈ ಗೊಂದಲ ಮುಂದುವರೆದಿದೆ, ಇದರ ಬಗ್ಗೆ ಪ್ರಸ್ತಾಪ ಮಾಡಲಿ, ಸರ್ಕಾರ ಉತ್ತರ ಕೊಡಲಿ, ಇದಕ್ಕೆ ಒಂದು ಪರಿಹಾರವನ್ನು ಹುಡುಕುವ ಪ್ರಯತ್ನ ಮಾಡೋಣ.

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ನನ್ನ ಮನವಿ ಏನೆಂದರೆ, ಸರ್ಕಾರ ಚರ್ಚೆಗೆ ಸಿದ್ಧವಿದ್ದರೆ ಈ ಕಾಲವನ್ನು ಉಳಿಸಬಹುದು, ಇನ್ನು ಬೇರೆ ಅನೇಕ ವಿಷಯಗಳಿದ್ದಾರೆ.....

ಶ್ರೀ ಜೆ.ಸಿ. ಶ್ರೀರಾಮರೆಡ್ಡಿ : ನೀವು ಅನುಮತಿ ಕೊಟ್ಟಿ ಬಿಡಿ ಚರ್ಚೆಗೆ ಟೈಂ ಉಳಿಯುತ್ತದೆ, ನೀವು ಪ್ರಿಲಿಮನರಿ ಸಬ್ಮಿಷನ್‌ಗೆ ಅನುಮತಿ ಕೊಟ್ಟುಬಿಡಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಕೈಗೆತ್ತಿಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬಹುದು, ಯಾವರೀತಿಯಲ್ಲಿ ತೆಗೆದುಕೊಳ್ಳಬೇಕೆನ್ನುವುದು ತಮ್ಮ ವಿವೇಚನೆಗೆ ಬಿಟ್ಟಿದ್ದು, ನಾವು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು : ಈ ವಿಚಾರ ಬಹಳ ಪ್ರಮುಖವಾದುದು, ಬಹಳ ಗಂಭೀರವಾದುದು, ಈ ಬಗ್ಗೆ ಚರ್ಚೆಯಾಗಬೇಕಾದ್ದು ಅಗತ್ಯವಿದೆ ಅದಕ್ಕೆ ಸರ್ಕಾರದ ಒಪ್ಪಿಗೆಯಾಗಿದೆ. ಆಳುವವರು, ವಿರೋಧಪಕ್ಷದವರೆಲ್ಲಾ ಚರ್ಚೆಮಾಡಿ ಗಂಭೀರವಾಗಿ ಚರ್ಚೆ ಮಾಡಿ, ಉಪಯುಕ್ತವಾಗಿ ಇಡೀ ಸಭೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿ ಆದುದರಿಂದ ನಾನು ನಿಯಮ 69ರ ಅಡಿಯಲ್ಲಿ ಈ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ. ಅದಕ್ಕೆ ಕಾಲ ನಿಗದಿ ಮಾಡುತ್ತೇನೆ. ಇದು ಬಹಳ ಗಂಭೀರವಾದ ವಿಚಾರವೆಂದು ನಾನು ಒಪ್ಪಿದ್ದೇನೆ. ಚರ್ಚೆಗೆ ಕಾಲನಿಗದಿ ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ಇದು ಕಾಲ ನಿಗದಿ ಮಾಡುವುದಲ್ಲ, ಒಂದೊಂದು ಗಂಟೆಯೂ ಸಹ ರಾಜ್ಯದಲ್ಲಿ ಒಂದು ರೀತಿ ಬೆಂಕಿ ಹತ್ತಿಕೊಂಡಿದೆ, ಆಕ್ರೋಶದಿಂದ ಯುವಕರು ಬೀದಿಗಿಳಿದಿದ್ದಾರೆ. ಸದನ ನಡೆಯುತ್ತಿದೆ, ನಿನ್ನೆ ಬೆಳಿಗ್ಗೆ ವಿಶೇಷವಾದ ವಿಷಯದ ಬಗ್ಗೆ ಚರ್ಚೆ ಇತ್ತೆಂದು ಇದನ್ನು ನಿನ್ನೆಯೇ ತೆಗೆದುಕೊಳ್ಳಬೇಕಾಗಿತ್ತು, ಹಾಗಾಗಿ ನಿನ್ನೆ ನೀವು ಚರ್ಚೆಗೆ ಅವಕಾಶ ಮಾಡಿಕೊಡಲಿಲ್ಲ. ಈಗ ಪ್ರಶ್ನೋತ್ತರವಾಗಬೇಕೆಂದು ತಮ್ಮ ಮಾತಿಗೆ ಗೌರವಕೊಟ್ಟು ನಾವು ಗೌರವದಿಂದ ಅದರಂತೆ ನಡೆದುಕೊಂಡಿದ್ದೇವೆ. ಈಗ ಇದಕ್ಕೆ ಚರ್ಚೆ ಮಾಡಲು ಅವಕಾಶ ಕೊಟ್ಟು

ಒಂದು ಪರಿಹಾರ ಹುಡುಕೋಣ, ಈ ಚರ್ಚೆ ಇಷ್ಟು ಗಂಟೆಯಾಳಗಾಗಬೇಕೆಂದು ಸಮಯ ನಿಗದಿ ಮಾಡಿ ನಮ್ಮ ಅಭ್ಯಂತರವಿಲ್ಲ, ಆದರೆ ಚರ್ಚೆ ಪ್ರಾರಂಭ ಮಾಡಿ ಅದಕ್ಕೆ ಪರಿಹಾರ ಹುಡುಕುವುದಕ್ಕೆ ಅವಕಾಶ ಮಾಡಿಕೊಡಿ ಎಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇವತ್ತು ಇಡೀ ರಾಜ್ಯದ ಜನತೆ ನೋಡುತ್ತಿರುವಂತಹ ಸಂದರ್ಭದಲ್ಲಿ ಈ ಚರ್ಚೆಯನ್ನು ಇವತ್ತೇ ಮುಗಿಸಿಬಿಡಿ.

ಅಧ್ಯಕ್ಷರು : ನಾನು ಚರ್ಚೆಗೆ ಸಮಯ ನಿಗದಿ ಮಾಡಿಕೊಡುತ್ತೇನೆ, ಅದಾದ ಮೇಲೆ ಬೇರೆ ಕಾರ್ಯಕ್ರಮಗಳ ಪಟ್ಟಿಯಲ್ಲಿರುವಂತೆ ನಡೆಯಲಿ. ನಾನು ಇವತ್ತೇ ಒಂದು ಕಾಳನಿಗದಿ ಮಾಡಿಕೊಡುತ್ತೇನೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಚಾಮರಾಜ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಪ್ರಸ್ತಾಪ ಮಾಡಲು ತಮಗೆ ಕೇಳಿದ್ದೆ, ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕು ಅಂತ, ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರದಲ್ಲಿ ನಾಲ್ಕೈದು ದಿವಸದಿಂದ ಕುಡಿಯುವ ನೀರಿಲ್ಲ, ಯಂತ್ರಗಳು ಕೆಟ್ಟುಹೋಗಿವೆ, ಅಲ್ಲಿ 28 ಕೋಟಿ ಖರ್ಚು ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರೂ ಅಲ್ಲಿ ನೀರಿಲ್ಲ, ಅತ್ಯಂತ ಶೋಷನೀಯವಾದ ಪರಿಸ್ಥಿತಿಯಾಗಿದೆ. ಒಂದು ಕಡೆ ಕುಡಿಯುವ ನೀರಿಲ್ಲ ಮತ್ತೊಂದು ಕಡೆ ಕಬ್ಬನ್ನು ಬೆಳೆಯುವ ರೈತರಿಗೆ ನೂರೆಂಟು ತೊಮದರೆಗಳಾಗಿವೆ. ಕುಡಿಯುವ ನೀರಿಲ್ಲದೆ ಜನ ಕಂಗಾಲಾಗಿದ್ದಾರೆ. ಇದರ ಜೊತೆಗೆ 350 ಕೊಳವೆಬಾವಿ ಕೆಟ್ಟುಹೋಗಿವೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು, ಉತ್ತರಕ್ಕಾಗಿ ಒತ್ತಾಯಿಸಿ ನಾನು ಧರಣಿ ಮಾಡುತ್ತೇನೆ. ಮುಖ್ಯಮಂತ್ರಿಗಳು ಉತ್ತರಿಸಬೇಕು.

(ಸದನದ ಬಾವಿ ಪ್ರವೇಶಿಸುವರು)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ನನ್ನ ಮನವಿ ಏನೆಂದರೆ ಧರಣಿ ಮಾಡುವುದೇ ಪ್ರತಿಯೊಂದಕ್ಕೂ ಪರಿಹಾರವಲ್ಲ, ನೀವೇನೋ ವಿಚಾರ ಎತ್ತಿದ್ದೀರಿ, ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ, ಅದಕ್ಕಾಕೆ ಇಲ್ಲಿಗೆ ವೆಲ್ ಗೆ ಬರಬೇಕು? I cannot understand.

ಶ್ರೀ ಧರ್ಮಸಿಂಗ್ : (ಮುಖ್ಯಮಂತ್ರಿಗಳು) ಉತ್ತರ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಆಸೀನರಾಗಬೇಕು, ಅವರು ಆಸನಕ್ಕೆ ಹೋಗಲಿ, ಆಮೇಲೆ ನೀವು ಉತ್ತರ ಕೊಡಿ. ಮಾನ್ಯ ವಾಟಾಳರೇ ದಯಮಾಡಿ, ನೀವು ಒಂದು ವಿಚಾರ ಎತ್ತಿದ್ದೀರಿ ಅವರು ಉತ್ತರ ಕೊಡುತ್ತಾರೆ ವೆಲ್‌ಗೆ ಇಲ್ಲಿ ಏಕೆ ನೀವು ಬರಬೇಕು? ಅದು ಅರ್ಥವಾಗುವುದಿಲ್ಲವಾ ದಯಮಾಡಿ ತಮ್ಮ ಆಸನಕ್ಕೆ ಹೋಗಿರಿ. ಉತ್ತರ ಕೊಡಿಸುತ್ತೇನೆ. ದಯಮಾಡಿ ಸಹಕರಿಸಬೇಕು. ಕುಳಿತು ಕೊಳ್ಳಿ ಅವರು ಉತ್ತರ ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳೆ ಈಗ ದಯಮಾಡಿ ಉತ್ತರಿಸಿ. ಮಾನ್ಯ ಸದಸ್ಯರೇನು ಎತ್ತಿದ್ದಾರೆ ಅದಕ್ಕೆ ಸಭಾನಾಯಕರು ಉತ್ತರ ಕೊಡಿ.

ಶ್ರೀ ಧರ್ಮಸಿಂಗ್ : ಮಾನ್ಯ ವಾಟಾಳ್ ನಾಗರಾಜ್‌ರವರು ಹಿರಿಯ ಸದಸ್ಯರಾಗಿದ್ದಾರೆ, ಚಾಮರಾಜನಗರ ಕ್ಷೇತ್ರದಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಅಂದಿದ್ದಾರೆ ನನಗೇನು ಅನ್ನಿಸುತ್ತದೆ,